<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>
**<u>F.D.P. No.35/2023. DW-2.</u>**

ದಿನಾಂಕಃ**03.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ಅರ್ಜಿದಾರರ ಪರ ವಕೀಲರಿಂದಃ-

ನಾನು ದೇವರಹಳ್ಳಿ ಗ್ರಾಮದವರು ಎಂದರೆ ಸರಿ. ನನಗೆ DW 1 ರವರ ಪರಿಚಯವಿದೆ. ನಾನು ಮತ್ತು ಮಲ್ಲೇಶಪ್ಪ ಪ್ರಕರಣವಿದ್ದಾಗ ಜೊತೆಯಲ್ಲಿ ಬರುತ್ತಿದ್ದೆವು ಎಂದರೆ ಸರಿ. ಸಾಕ್ಷಿಯು ನಮ್ಮದು ಬೇರೆ ಕೇಸು ಅವರದ್ದು ಬೇರೆ ಕೇಸು ಎನ್ನುತ್ತಾರೆ. ಗಂಗಾಧರಪ್ಪ ಗೊತ್ತು. ಸದರಿಯವರು ನನ್ನ ಮೇಲೆ ಕೇಸು ದಾಖಲು ಮಾಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಮಲ್ಲೇಶಪ್ಪ ನನ್ನ ಪರ ಸಾಕ್ಷಿ ಹೇಳಿದ್ದಾರೆ ಎಂದರೆ ಸರಿ. ದಿಃ05.10.2009 ರಲ್ಲಿ ವಿಲ್ ಆಗಿರುತ್ತದೆ. ಸದರಿ ವಿಲ್ ಬೆಂಗಳೂರಿನ ರಜಾಜಿನಗರದಲ್ಲಿ ಮಾಡಲಾಗಿದೆ. ಸದರಿ ವಿಲ್ ನಲ್ಲಿ ತನ್ನ ಭಾಗಕ್ಕೆ ಬಂದ ಜಮೀನನ್ನು ನನ್ನ ಮಗ ನಟೇಶ್ ಗೆ ಬರೆದಿರುತ್ತೇನೆ ಎಂದು ಬರೆಯಲಾಗಿದೆ. ಸದರಿ ಮಲ್ಲೇಶಪ್ಪನಿಗೆ 1/3 ಭಾಗ ಬಂದಿತ್ತು. ಸದರಿ ವಿಲ್ ನಲ್ಲಿ ಮಲ್ಲೇಶಪ್ಪನ ಭಾಗಕ್ಕೆ ಬಂದ 1/3 ಭಾಗವನ್ನು ಮಾತ್ರ ಬರೆಯಲಾಗಿದೆ.

ನಾನು ಮತ್ತು ಮಲ್ಲೇಶಪ್ಪ ಒಂದೇ ಊರಿನವರಾಗಿದ್ದು ನನ್ನ ಪರ ಸಾಕ್ಷಿ ಹೇಳಿದ್ದರಿಂದ ವಿಲ್ ಅನ್ನು ಮಲ್ಲೇಶಪ್ಪ ರವರು ಸೃಷ್ಟಿಸಿದ ವಿಲ್ ಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮಲ್ಲೇಶಪ್ಪ ಮಾಡಿದ ವಿಲ್ ಗೆ ಸಹಿ ಮಾಡಿರುತ್ತೇನೆ.

ನಿ ಡಿ 1 ನ್ನು ನೋಟರಿ ಕಛೇರಿಯಲ್ಲಿ ಮಾಡಿದ್ದು ಯಾರದ್ದು ಎಂದು ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ನಿಡಿ 1 ನ್ನು ಇತ್ತೀಚೆಗೆ ಸೃಷ್ಟಿಸಿದ್ದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರು ನನ್ನ ಸಹೋದರಿ. ಮಲ್ಲೇಶಪ್ಪ ನನ್ನ ತಂದೆ ಎಂದರೆ ಸರಿ. ಅರ್ಜಿದಾರರು ನನ್ನ ಮತ್ತು ನನ್ನ ತಂದೆಯ ವಿರುದ್ಧ ದಾವೆ ಹೂಡಿದ್ದರು ಎಂದರೆ ಸರಿ. ಸದರಿಯು ಓ ಎಸ್ 261/2007 ಎಂದರೆ ಸರಿ. ದಿಃ07.07.2009 ರಂದು ಅರ್ಜಿದಾರರಿಗೆ ಭಾಗಾಂಶ ನೀಡುವಂತೆ ಡಿಕ್ರಿಯಾಗಿದೆ ಎಂದರೆ ಸರಿ. ಈಗ ನೋಡುತ್ತಿರುವುದು ಸದರಿ ದಾವೆಯ ತೀರ್ಪು ಮತ್ತು ಡಿಕ್ರಿ ಎಂದರೆ ಸರಿ. ಅದನ್ನು ನಿಪಿ 1, 2 ಎಂದು ಗುರುತಿಸಲಾಯಿತು.

ಸದರಿ ಡಿಕ್ರಿ ಆಧಾರದ ಮೇಲೆ ಅರ್ಜಿದಾರರು ಎಫ್ ಡಿ ಪಿ ನಂ.19/2009 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೂಲ ದಾವೆ ಮತ್ತು ಎಫ್ ಡಿ ಪಿ ಪ್ರಶ್ನಿಸಿ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಎಫ್ ಡಿ ಪಿ ಮತ್ತು ಅಪೀಲು ವಜಾ ಆಗಿದೆ ಎಂದರೆ ಸರಿ. ಸದರಿ ಎಫ್ ಡಿ ಪಿ ನಲ್ಲಿ ಹೊಸದಾಗಿ ಅಂತಿಮ ಡಿಕ್ರಿಗಾಗಿ ಅರ್ಜಿ ಸಲ್ಲಿಸುವಂತೆ

ಆದೇಶಿಸಲಾಗಿತ್ತು ಎಂದರೆ ಸರಿ. ಅಪೀಲಿನ ವಜಾ ಆದೇಶ ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಆರ್ ಎಸ್ ಎ ಸಲ್ಲಿಸಿದ್ದ ಎಂದರೆ ಸರಿ. ಸದರಿ ಆರ್ ಎಸ್ ಎ ಕೂಡ ವಜಾ ಗೊಂಡಿದೆ ಎಂದರೆ ಸರಿ. ಸದರಿಯು 2021 ರಲ್ಲಿ ಮುಗಿದಿದೆ ಎಂದರೆ ಸರಿ. ನನ್ನ ತಂದೆ 2016 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟ ವಿಚಾರವನ್ನು ನಾನು ಸದರಿ ಅಪೀಲಿನಲ್ಲಿ ಹೇಳಿಲ್ಲ. ಸದರಿ ವಿಚಾರವನ್ನು ಹೇಳದೆ ಮುಚ್ಚಿಟ್ಟಿದ್ದ ಕಾರಣ ನನ್ನ ತಂದೆಯ ಹೆಸರಿನಲ್ಲಿಯೇ ಆರ್ ಎಸ್ ಎ ವಜಾಗೊಂಡಿದೆ ಎಂದರೆ ಸರಿಯಲ್ಲ.

ನನ್ನ ತಂದೆಯು ತನ್ನ ಭಾಗಕ್ಕೆ ಬರುವ ಎಲ್ಲಾ ಸ್ವತ್ತುಗಳನ್ನು ನನಗೆ ಸೇರುವಂತೆ ವಿಲ್ ಬರೆದಿರುತ್ತಾರೆ. ಸದರಿ ವಿಲ್ ನಲ್ಲಿ ಡಿಕ್ರಿಯಲ್ಲಿ ನಮೂದು ಇರುವ ಎಲ್ಲಾ ಸ್ವತ್ತುಗಳು ಸೇರಿವೆ ಎಂದರೆ ಸರಿ. ನನ್ನ ತಂದೆಗೆ ನಿರ್ದಿಷ್ಟವಾಗಿ ಇಂತಹದ್ದೆ ಜಮೀನು ಎಂದು ವಿಭಾಗವಾಗಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 1/3 ನೇ ಭಾಗ ಎಂದು ನಿಗಧಿಯಾಗಿತ್ತು ಎನ್ನುತ್ತಾರೆ. ಅರ್ಜಿದಾರರಿಗೆ ಮೋಸಮಾಡಬೇಕೆಂದು ವಿಲ್ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣದ ನಂತರ ಆರ್ ಎಸ್ ಎ ನಲ್ಲಿ ನನ್ನ ತಂದೆಯು ವಿಲ್ ಬರೆದಿರುವ ವಿಚಾರವನ್ನು ಹೇಳಲು ತೊಂದರೆ ಇರಲಿಲ್ಲ. ನಾನು ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ವಿಲ್ ಬರೆದಿರದೆ ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.